ವಿದ್ಯಾನಿಲಯದ ಆಡಳಿತ ಕಚೇರಿಯು ಮಂಗಳೂರಿನಲ್ಲಿರುವುದಕ್ಕೆ ಬದಲಾಗಿ ಕೊಣಾಜೆಯಲ್ಲೇ ಇರಬೇಕೆಂಬುದು. ಇನ್ನೊಂದು ಬೇಡಿಕೆ ಎಂದರೆ ವಾರ್ಷಿಕ ಬಜೆಟ್ ೨೪೦ ಲಕ್ಷ ರೂ.ಗಳನ್ನು ಅವರು ಕೇಳಿದ್ದರೂ ಸರ್ಕಾರದವರು ಕೇವಲ ೬೦ ಲಕ್ಷ ರೂ. ಮಂಜೂರು ಮಾಡಿರುವುದು...

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರವನ್ನು ತಾವು ಸಭೆಯ ಗಮನಕ್ಕೆ ತಂದಿದ್ದೀರಿ, ಇದನ್ನು ನಾನು ಮಾನ್ಯ ವಿದ್ಯಾ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಪ್ಲಾಂಟೇಷನ್ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತ್ಯೂರು).—ಮಾನ್ಯ ಅಧ್ಯಕ್ಷರೆ, ಹಾಸನ ಮತ್ತು ಚಿಕ್ಕಮಗಳೂರಿನ ಕಾಫಿ ಪ್ಲಾಂಟೇಷನ್ ನೌಕರರು ತಮ್ಮ ಸಂಬಳದಲ್ಲಿ ವಿಮರ್ಶಯಾಗಬೇಕು, ಬೆಲೆ ಸೂಚ್ಯಂಕಕ್ಕೆ ಅನುಸಾರವಾಗಿ ತುಟ್ಟಿಭತ್ಯ ಏರಿಸಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಲೇಬರ್ ಇಲಾಖೆಯವರು ಒಂದು ಸಭೆಯನ್ನು ಕೊಡಗಿನಲ್ಲಿ ಕರೆದು ಯಾರು ಮುಷ್ಕರಕ್ಕೆ ನೋಟೀಸ್ ಕೊಟ್ಟಿಲ್ಲ ಅಂಥವರ ಹತ್ತಿರ ಹೋಗಿ ಈ ಮುಷ್ಕರವನ್ನು ನಾವು ವಾಪಸು ತೆಗೆದುಕೊಂಡಿದ್ದೇವೆಂದು ಬರೆಸಿಕೊಂಡು ಬಂದಿದ್ದಾರೆ, ಆದರೆ ಮುಷ್ಕರ ಮಾಡುವುದಾಗಿ ನೋಟೀಸ್ ಕೊಟ್ಟಿರತಕ್ಕ ನಮ್ಮ ಹತ್ತಿರ ಅವರು ಬಂದೇ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ತಾವು ಎಲ್ಲ ಪ್ಲಾಂಟೇಷನ್ ನವರನ್ನೂ ಕರೆಸಿಕೊಂಡು ಈ ಕಾರ್ಮಿಕರ ಬೇಡಿಕೆಯನ್ನು ಈಡೇರಿಸಬೇಕೆಂದು ತಿಳಿಸಿ ಈ ಮುಷ್ಕರವನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEE SAIT (Minister for Labour and Wakf).—Mr. Speaker Sir, I may be permitted to sit and speak.

MR. SPEAKER.—Yes.

SRI AZEEZ SAIT.—Sir, Hon'ble Member Sri Suryanarayana Rao has brought this matter to my notice...

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಅಜೀಜ್ ಸೇಠ್‌ರವರು ಕೂತುಕೊಂಡು ಉತ್ತರವನ್ನು ಕೊಡುತ್ತಿದ್ದಾರೆ. ಅಲ್ಲದೆ ಅವರು ಸದನದ ಹೊರಗಡೆ ಕನ್ನಡದಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ, ಅವರಿಗೆ ಕನ್ನಡ ಬರುತ್ತದೆ, ಆದ್ದರಿಂದ ಕನ್ನಡದಲ್ಲೇ ಅವರು ಉತ್ತರ ಕೊಡುವಂತೆ ತಿಳಿಸಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಪ್ರತಿಯೊಬ್ಬರಿಗೂ ಕನ್ನಡದ ಮೇಲೆ ಅಭಿಮಾನ ಇದೆ. ಕೇವಲ ನಿಮಗೆ ಮಾತ್ರ ಅಲ್ಲ. ಅಲ್ಲದೆ ಯಾರೇ ಆಗಲಿ ಅವರವರ ಮಾತೃಭಾಷೆಯಲ್ಲಿ ಮಾತನಾಡುವುದಕ್ಕೆ ಅಥವಾ ಬೇರೆ ಭಾಷೆಯಲ್ಲಿ ಮಾತನಾಡುವುದಕ್ಕೆ ಕೂಡ ಅವಕಾಶ ಇದೆ. ಇದನ್ನು ತಾವು ತಿಳಿದುಕೊಳ್ಳಬೇಕು. ಇತ್ತೀಚೆಗೆ ತಮ್ಮ ವರ್ತನೆ ಬಹಳವಾಗಿ ಆಗುತ್ತಿದೆ.

SRI AZEEZ SAIT.—Sri Suryanarayana Rao himself is a Member of the Minimum Wage Board and the subject is before them. When I was not in the station my colleague Mr. Raghupathy had a meeting and this requires only legal sanction. I cannot declare the minimum wage *suomoto*. Now, the Minimum Wage Board is seized of the matter. Meanwhile what I did, I want to inform the House. I somehow brought an understanding between the management and the workers, who have got different unions. From December 1983, Rs-9.35, would be paid as minimum wage and Rs.125 would be paid as *ex-gratia* to workers. To this proposal some of the unions have agreed and some of them have not agreed. Therefore, I am convening a meeting again on 24th in my chamber in this regard, and I am confident a settle-

ment would be arrived at. So, nothing prevents them to have their further demands and negotiations for a higher wage. It is their constitutional birth and right. But what I appeal to Mr. Suryanarayana Rao is, not to precepitate the matter since the picking season has started. We have to consider the economy also. Loss of economy is a loss to the nation. Therefore, I appeal to him to advise his union colleagues to attend the meeting which I am convening on 24th. I have also excercised my powers and told management people to go and pursuade small growers in this regard. They have given a letter accepting the payment of minimum wage of Rs-9.35, but they have not ageed to pay Rs.125. I am persuading them also and I think my efforts will bear good results. I request Sri. Suryanarayana Rao, at least to tolerate till 24th, the date on which, I have decided to convene a meeting.

ಅಧ್ಯಕ್ಷರು.—ಮಾನ್ಯ ಸೂರ್ಯನಾರಾಯಣರಾವ್‌ರವರು ದಿನಾಂಕ ೨೦-೧-೮೪ರ ಪ್ರಜಾವಾಣಿ ಪತ್ರಿಕೆಯಲ್ಲಿ ''ಕಾರ್ಮಿಕ ಸಂಘಗಳ ಆಸ್ತಿ ಹತೋಟಿಗೆ ಕಾನೂನು'' ಎಂದು ವರದಿಯಾಗಿರುವ ಬಗ್ಗೆ ಕಳುಹಿಸಿಕೊಟ್ಟಿರುವ ನೋಟೀಸ್ ಬಗ್ಗೆ.

ಶ್ರೀ ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾರ್ಮಿಕ ಸಚಿವರು ದಿನಾಂಕ ೨೦ರ ಪ್ರಜಾವಾಣಿ ಪತ್ರಿಕೆಯಲ್ಲಿ ''ಕಾರ್ಮಿಕ ಸಂಘಗಳಿಗೆ ಸೇರಿರುವ ಆಸ್ತಿಯನ್ನು ಅವುಗಳ ನಾಯಕರೇ ತಮ್ಮ ಸ್ವಂತ ಉಪಯೋಗಕ್ಕಾಗಿ ಬಳಸಿಕೊಂಡ ಅನೇಕ ನಿದರ್ಶನಗಳಿದ್ದು ಇದನ್ನು ತಡೆಗಟ್ಟಲು ಕಾನೂನಿನ ಅವಶ್ಯಕತೆ ಇದೆ ಎಂದೂ, ಅನಂತರ ಮಾನ್ಯ ಸಚಿವರು ಮುಂದುವರಿದು ಕಾರ್ಮಿಕರು ಕಾನೂನು ರೀತ್ಯ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಬದಲು ಮುಷ್ಕರ ಘೆರಾವ್, ಮುಂತಾದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಲಿಚ್ಛಿಸುವ ಕಾರ್ಮಿಕ ಸಂಘಗಳ ಪ್ರವೃತ್ತಿಯನ್ನು ಅವರು ಬಲವಾಗಿ ಖಂಡಿಸಿದ್ದಾರೆಂದು ವರದಿಯಾಗಿರುತ್ತದೆ. ಮುಷ್ಕರ ಹೂಡುವುದು ಕಾನೂನು ಬಾಹಿರವೇ ? ಯಾವ ಕಾರಣವು ಇಲ್ಲದೆ ಮಾಲೀಕರು ಲಾಕ್‌ಔಟ್ ಮಾಡುತ್ತಿರುವುದರಿಂದ ಇಡೀ ಕಾರ್ಮಿಕ ವರ್ಗದಲ್ಲಿ ಕಳವಳ ಉಂಟಾಗಿದೆ. ಆದ್ದರಿಂದ ಮಾನ್ಯ ಸಚಿವರು ಮುಷ್ಕರ ಮಾಡುವುದು ಕಾನೂನು ಬಾಹಿರವೇ ಎಂದು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEEZ SAIT.—I know that strike is used as a weapon in the last resort. But, it is not happening so nowadays. Even though there is an agreement, workers go on strike due to rival and ultra-rival unionism. It is rampant in our State as well as in the country. It is a very bad thing and a very sorry state of affairs. It is very bad to workers as well as to industries. I am only appealing to workers not to resort to strikes immediately. Let them settle matters by way of conciliations, and negotiations, which is an agreed constitutional way of approach to the problem. But, today, it is quite opposite. An agreement will be arrived at and within one month there would be a strike; second agreement takes place and within one month strike notice will be given; and third agreememt will be arrived at and there is a strike immediately. That means no respect for agreed settlements arrived at. There are instances where union properties has been acquired by different union leaders in the name of unions. Mr. Suryanarayana Rao knows it very well. I don't

want to name them and it is not correct also. Mr. Suryanarayana Rao knows well that there is an oldest trade union in Bangalore which has acqired properties worth 15 lakhs of rupees but now it has become one man property, which should not have happened. The Union properties must be utilised for by the union for the welfare of workers. Here, the trade union is there. There are instances where benami trade unions are there and therefore, my intention is to see that the properties of the trade union should be used by the genuine or recognised trade unions only for the welfare of workers rather than being used by one individual. I have got a right to take steps to see that trade union movement grow in this State and the property of trade unions should be used by trade unions only. I never said anything against workers. The welfare of workers are upper most in my mind. Trade union movement is accepted by all. Even Central Laws are there in this regard. But, it is necessary to have a rethinking in this regard. As you know, I don't have much powers to do anything about it. Therefore, it is upto them to make improvements. I am of the opinion that there should be one union and one leader, chosen by the workers of that particular factory. I don't think anybody can object for my view.

ಶ್ರೀ ಪಿ. ರಾಮಚಂದ್ರರಾವ್.—ಅಧ್ಯಾಪಕರು ಚುನಾವಣೆಯ ಕಾಲದಲ್ಲಿ ಮುಷ್ಕರ ಹೋಗ್ಯವುದು ಬಹಳ ಅಪರೂಪ. ಬೆಂಗಳೂರು ಯೂನಿವರ್ಸಿಟಿಗೆ ಸೇರಿದ ಅಧ್ಯಾಪಕರು ಬಹಳ ಮುಖ್ಯವಾದ ಬೇಡಿಕೆಗಳನ್ನು ಇಟ್ಟಿದ್ದರೂ ಅದರ ಬಗ್ಗೆ ಬಹಳ ಕಾಲದಿಂದ ಸಂಧಾನ ಮಾಡದೆ ಇರುತ್ತಾರೆ. ಅದು ಯೂನಿವರ್ಸಿಟಿ ವೈಸ್‌ಚಾನ್ಸಲರ್‌ರವರ ಅಡಮೆಂಟ್ ಅಟಿಟ್ಯೂಡ್‌ನಿಂದ ಅವರಿಗೆ ಯು.ಜಿ.ಸಿ ಯಿಂದ ಬರಬೇಕಾದ ಸವಲತ್ತುಗಳೂ ಸಹ ಸಿಕ್ಕುತ್ತಿಲ್ಲ. ಕೊನೆಗೆ ಯಾರ ಸಹಾಯವೂ ಇಲ್ಲದೆ ಇರುವುದರಿಂದ ಮುಷ್ಕರ ಹೂಡಿದ್ದಾರೆ. ಅದ್ದರಿಂದ ಸರ್ಕಾರದವರು ಕೂಡಲೇ ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ನಾನು ವಿದ್ಯಾ ಮಂತ್ರಿಗಳ ಗಮನಕ್ಕೆ ತರುತ್ತೇನೆ.

iii) ರಾಜಕುಮಾರ್ ಅಭಿಮಾನಿಗಳ ಸಂಘದ ಕಛೇರಿ ಮೇಲೆ ಪೋಲೀಸರ ದಾಳಿ

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸನ್‌ಮಾನ್ಯ ಸಭಾಧ್ಯಕ್ಷರೇ ನಿನ್ನೆ ದಿವಸ ಬೆಂಗಳೂರು ಕೇಂದ್ರದಲ್ಲಿ ರಾಜಕುಮಾರ್ ಅಭಿಮಾನಿಗಳ ಕೇಂದ್ರ ಸಂಘದ ಕಚೇರಿಯ ಮೇಲೆ ಪೋಲೀಸ್‌ನವರು ದಾಳಿ ಮಾಡಿ, ಅಲ್ಲಿದ್ದವರನ್ನು ಅರೆಸ್ಟ್ ಮಾಡಿ, ಯಾವ ಕಾನೂನು ಇಲ್ಲದೆ ಆಫೀಸ್‌ಗೆ ಬೀಗ ಹಾಕಿ ದೌರ್ಜನ್ಯವನ್ನು ನಡೆಸಿ, ನಮ್ಮ ರಾಜ್ಯದ, ಕರ್ನಾಟಕದ ಕಣ್ಮಣಿಯಾಗಿರತಕ್ಕಂಥ ರಾಜಕುಮಾರ್ ಅವರ ಅಭಿಮಾನಿಗಳ ಸಂಘದ ಮೇಲೆ ಈ ರೀತಿಯಾಗಿ ದಾಳಿ ಮಾಡಿರುವುದು ಒಂದು ವಿಶೇಷವಾದ ಕೆಲಸವಾಗಿದೆ. ಪೋಲೀಸ್‌ನವರ ಈ ಕೆಲಸವನ್ನು ಜನತಾ ಸರ್ಕಾರದವರು ತಡೆಗಟ್ಟುವುದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲಿಲ್ಲ. ಈ ಕೆಲಸವನ್ನು ಮಾಡಲು ಸರ್ಕಾರದವರು ನೇಮಕ ಮಾಡಿದ್ದು ತಪ್ಪು. ಮನೆಯಲ್ಲಿರತಕ್ಕಂಥ ಶಾಸಕರನ್ನು ಬೆನ್ನು ಹತ್ತುತ್ತಿರುವುದಲ್ಲದೆ ಕನ್ನಡಕ್ಕಾಗಿ ದುಡಿಯುತ್ತಿರುವ ಸಂಘ ಸಂಸ್ಥೆಗಳಿಗೆ ಈ ರೀತಿ ಹಿಂಸೆ ಕೊಡತಕ್ಕಂಥದ್ದು, ಆಫೀಸಿಗೆ ಬೀಗ ಹಾಕುವುದು ಒಂದು ದೊಡ್ಡ ಹೀನಕೃತ್ಯವಾಗಿದೆ. ಬೆಂಗಳೂರು ಬಂದ್‌ಗೆ ಕರೆಕೊಟ್ಟು ಕನ್ನಡಕ್ಕಾಗಿ ಹೋರಾಟ ಮಾಡುತ್ತಿರತಕ್ಕಂಥ ಇಂಥ ಸಂಘ ಸಂಸ್ಥೆಗಳಿಗೆ ಹಿಂಸೆ ಕೊಡುತ್ತಿರುವುದು ಬಹಳ ದೊಡ್ಡ ಆಘಾತವಾಗುತ್ತಿದೆ. ಇದರ ಬಗ್ಗೆ ತನಿಖೆ ಆಗಬೇಕೆಂದು ಸರ್ಕಾರವನ್ನು ತೀವ್ರವಾಗಿ ಒತ್ತಾಯಿಸುತ್ತೇನೆ.